ತಹಸೀಲ್ದಾರ್ ಹುದ್ದೆಗಳಿಗೆ ನೇಮಿಸುತ್ತಿರುವ ಸಚಿವಾಲಯದ ಶಾಖಾಧಿಕಾರಿಗಳನ್ನು (ಕ್ಷೇತ್ರ ತರಬೇತಿ) ನಿಯೋಜನೆ ರದ್ದುಗೊಳಿಸಿ ಹಿಂತಿರುಗಿಸುವ ಬೇಡಿಕೆ ಇರುತ್ತದೆ. ವೃಂದ ಮತ್ತು ಅಧೀನ ಕಾರ್ಯದರ್ಶಿ ವೃಂದದ ಹಲವು ಅಧಿಕಾರಿಗಳನ್ನು ಕ್ಷೇತ್ರ ತರಬೇತಿ ಆಧಾರದ ಮೇಲೆ ತಹಸೀಲ್ದಾರರಾಗಿ ನಿಯೋಜಿಸಲಾಗಿದೆ.

ಕಂದಾಯ ಇಲಾಖೆಯಲ್ಲಿ 15 ವರ್ಷ ಸೇವೆ ಸಲ್ಲಿ ಎಲ್ಲಾ ಅರ್ಹ ಗ್ರೂಪ್-ಡಿ ದರ್ಜೆ ನೌಕರರನ್ನು ಮೇಲ್ದರ್ಜೆ ಹುದ್ದೆಗೆ ಏರಿಸುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಪರಿಶೀಲಿಸಲಾಗುತ್ತಿದೆ.

ತಹಸೀಲ್ದಾರ್ ಗ್ರೇಡ್-1 ಮತ್ತು ಗ್ರೇಡ್-2 ಹುದ್ದೆಗಳಲ್ಲಿರುವ ನಿಯಮ 12 ರಲ್ಲಿ ಮುಂದುವರೆಯುತ್ತಿರುವವರನ್ನು ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸಿ ಖಾಯಂಗೊಳಿಸುವುದು ಹಾಗೂ ತಹಸೀಲ್ದಾರ್ ಹುದ್ದೆಗೆ ಬಾಕಿ ಇರುವ ನೇರ ನೇಮಕಾತಿ ಹುದ್ದೆಗಳನ್ನು ಫ್ರೀಜ್ ಮಾಡುವ ಬೇಡಿಕೆ ಇರುತ್ತದೆ. ಕಂದಾಯ ಇಲಾಖೆಯ ಗ್ರೇಡ್-2 ತಹಸೀಲ್ದಾರ್ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಈಗಾಗಲೇ ಪ್ರಚಾರ ಪಡಿಸಿ ಸಲಹೆ ಹಾಗೂ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿರುತ್ತದೆ. ಇದಕ್ಕೆ ಪೂರಕವಾಗಿಸಿರುವ ಸಲಹೆ: ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ ಸೂಕ್ತ ಕ್ರಮ ಜರುಗಿಸಲಾಗುವುದು. ತದನಂತರ, ಗ್ರೇಡ್-1 ತಹಸೀಲ್ದಾರ್ ವೃಂದರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪರಿಗಣಿಸುವ ಬಗ್ಗೆ ಪರಿಶೀಲಿಸಲಾಗುವುದು.

ತಹಸೀಲ್ದಾರ್ ಗ್ರೇಡ್-2 ವೃಂದದ ಫ್ರೀಜ್ ಗೊಳಿಸುವ ವಿಷಯವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯೊಂದಿಗೆ ಸಮಾಲೋಚನೆ ನಡೆಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು. ನಂತರ ಕರ್ನಾಟಕ ನಾಗರೀಕ ಸೇವಾ ನಿಯಮ 32ರ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಹಸೀಲ್ದಾರ್ ಗ್ರೇಡ್-2 ವೃಂದದ ಅಧಿಕಾರಿಗಳನ್ನು ಖಾಯಗೊಳಿಸುವ ವಿಷಯವನ್ನು ಪರಿಶೀಲಿಸಲಾಗುವುದು.

ಶ್ರೀ ಯು.ಆರ್. ಸಭಾಪತಿ: ಈ ಬಗ್ಗೆ ಕಂದಾಯ ಇಲಾಖೆ ನೌಕರರ ಸಂಘದ ಪದಾಧಿಕಾರಿಗಳ ಜೊತೆ ಸರ್ಕಾರದವರು ಏನಾದರೂ ನೆಗೋಷಿಯೇಷನ್ ಮಾಡಿದ್ದಾರಾ? ಅವರೊದಿಗೆ ಚರ್ಚೆ ಮಾಡಿದ್ದಾರಾ ಎಂದು ತಮ್ಮ ಮೂಲಕ ಸಚಿವರಿಗೆ ಕೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಕಂದಾಯ ಇಲಾಖೆಯ ನೌಕರರೊಂದಿಗೆ ಸಂಘದ ಪದಾಧಿಕಾರಿಗಳ ಜೊತೆ ಕಂದಾಯ ಇಲಾಖಾ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು 8.3.03ರಂದು ಮಾತುಕತೆ ನಡೆಸಿರುತ್ತಾರೆ.

ಅಧ್ಯಕ್ಷರು: ಮಾನ್ಯ ಡಿ.ವಿ. ಸದಾನಂದಗೌಡ, ಶ್ರೀ ಪ್ರಭಾಕರ ಬಂಗೇರ, ಶ್ರೀ ಯೋಗೀಶ್‌ಭಟ್ ಬೀಡಿ ಕಾರ್ಮಿಕರ ಬಗ್ಗೆ ಸರ್ಕಾರದ ಗಮನ ಸೆಳೆಯುವುದು.

(ಆ) ವಿಷಯ: ಬೀಡಿ ಕಾರ್ಮಿಕರು ಹೊರ ರಾಜ್ಯಗಳಿಗೆ ಸ್ಥಳಾಂತರಗೊಳ್ಳುತ್ತಿರುವುದು.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿರುವ ಬೀಡಿ ಕಾರ್ಮಿಕರು ಹೊರ ರಾಜ್ಯಗಳಿಗೆ ಸ್ಥಳಾಂತರ ಆಗುತ್ತಿರುವ ಬಗ್ಗೆ ಕಾರ್ಮಿಕ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು): ಸನ್ಮಾನ್ಯ ಅಧ್ಯಕ್ಷರೇ ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ ಸುಮಾರು 2,78,872 ಬೀಡಿ ಕಾರ್ಮಿಕರಿರುತ್ತಾರೆ.

ಶ್ರೀ ಎನ್. ಯೋಗೀಶ್ ಭಟ್: ಅವರ ಪರವಾಗಿ ಬೇರೆ ಯಾರಾದರೂ ಓದಲಿ.

ಅಧ್ಯಕ್ಷರು: ಅವರ ಕಷ್ಟವನ್ನು ತಾವು ಅರ್ಥಮಾಡಿಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಉತ್ತರವನ್ನು ಒದಗಿಸಲಾಗಿದೆ ಅನ್ನುವ ಹಾಗೆ ಓದಲಾಗಿದೆ ಎಂದು ಹೇಳಿ ಬಿಡಲಿ.

SRI QUAMURAL ISLAM: No. No. I can read from pages.

ಸಿ.ಎಸ್. ನಾಡಗೌಡ: ಸಭಾಧ್ಯಕ್ಷರೇ, ಅವರ ಆರೋಗ್ಯ ಸರಿಯಿಲ್ಲ we can take it as read.

ಅಧ್ಯಕ್ಷರು: ಸರಿ ಉತ್ತರವನ್ನು ಓದಲಾಗಿದೆ. ಲಭ್ಯವಿರುವ ಅಂಕಿಅಂಶಗಳ ಪ್ರಕಾರ ರಾಜ್ಯದಲ್ಲಿ ಸುಮಾರು 2,79,872 ಮಂದಿ ಬೀಡಿ ಕಾರ್ಮಿಕರಿರುತ್ತಾರೆ. ಇವರಲ್ಲಿ ಬಹುಪಾಲು ಮಂದಿ ಅಂದರೆ ಶೇಕಡಾ 90 ರಷ್ಟು ಮಹಿಳಾ ಕಾರ್ಮಿಕರಿರುತ್ತಾರೆ.

ಕರ್ನಾಟಕ ರಾಜ್ಯದ ಮುಖ್ಯ ಉದ್ದಿಮೆಗಳಲ್ಲಿ ಬೀಡಿ ಉದ್ದಿಮೆಯೂ ಒಂದಾಗಿದ್ದು, ಪ್ರಸ್ತುತ ರಾಜ್ಯದ ಬೀಡಿ ಉದ್ದಿಮೆಗಳು ಬಹಳ ಸಂದಿಗ್ಧ ಪರಿಸ್ಥಿತಿ ಎದುರಿಸುತ್ತಿವೆ. ಕಚ್ಚಾ ಸಾಮಗ್ರಿಗಳ ಅಲಭ್ಯತೆ, ಉತ್ಪಾದಿತ ಬೀಡಿಗಳ ಮಾರಾಟದಲ್ಲಿ ಕೊರತೆ, ಬಹುರಾಷ್ಟ್ರೀಯ ಸಿಗರೇಟು ಕಂಪನಿಗಳೊಂದಿಗೆ ಸ್ಪರ್ಧೆ, ಬೀಡಿ ಎಲೆಗಳ ದರದಲ್ಲಿ ಹೆಚ್ಚಳ ಇತ್ಯಾದಿ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿವೆ. ಬೀಡಿ ಉದ್ಯಮದಲ್ಲಿನ ಹಿಂಜರಿತ ರಾಷ್ಟ್ರ ವ್ಯಾಪ್ತಿಯಾಗಿದ್ದು, ರಾಜ್ಯ ಸರ್ಕಾರವಲ್ಲದೆ ಕೇಂದ್ರ ಸರ್ಕಾರವು ಕ್ರಮ ಕೈಗೊಳ್ಳಬೇಕಾಗಿದೆ.

ರಾಜ್ಯದ ಬೀಡಿಕಾರ್ಮಿಕರಿಗೆ ವಾರದ ಎಲ್ಲಾ ದಿನಗಳಲ್ಲಿ ಕೆಲಸ ಸಿಗುತ್ತಿಲ್ಲವೆಂದು ತಿಳಿದು ಬರುತ್ತದೆ. 20 ಲಕ್ಷದವರೆಗೆ ಬೀಡಿ ತಯಾರಿಕರಿಗೆ ಕೇಂದ್ರ ಅಬಕಾರಿ ಸುಂಕದ ರಿಯಾಯಿತಿಯಿಂದ ಸಣ್ಣ ಸಣ್ಣ ಬೀಡಿ ಘಟಕಗಳು ಹುಟ್ಟಿಕೊಂಡು ಸ್ಪರ್ಧಾತ್ಮಕ ದರದಲ್ಲಿ ಬೀಡಿ ಮಾರಾಟ ಮಾಡುತ್ತಿರುವುದು ಇತ್ಯಾದಿ ಕಾರಣಗಳಿಂದ ಬೀಡಿ ತಯಾರಕರು ತಮ್ಮ ಬೀಡಿ ಕಾರ್ಮಿಕರಿಗೆ ವಾರದ ಎಲ್ಲಾ ದಿನಗಳಲ್ಲಿ ಕೆಲಸ ಕೊಡಲು ಸಾಧ್ಯವಾಗುತ್ತಿಲ್ಲ.

ದಕ್ಷಿಣ ಭಾರತ ಹಾಗೂ ಉತ್ತರ ಭಾರತ ಬೀಡಿ ಕಾರ್ಮಿಕರ ಮಧ್ಯೆ ನಿಗಧಿಕಪಡಿಸಿರುವ ಕನಿಷ್ಟ ವೇತನದಲ್ಲಿ ಬಹಳಷ್ಟು ವ್ಯತ್ಯಾಸವಿರುತ್ತದೆ. ಕರ್ನಾಟಕ ರಾಜ್ಯದಲ್ಲಿನ ನಿಗದಿಪಡಿಸಲಾದ ಕನಿಷ್ಟ ವೇತನಕ್ಕಿಂತ ನೆರೆಯ ರಾಜ್ಯಗಳ ಬೀಡಿ ಕಾರ್ಮಿಕರಿಗೆ ನಿಗದಿತ ಕನಿಷ್ಟ ವೇತನ ಕಡಿಮೆ ಇದ್ದು, ಹೊರ ರಾಜ್ಯಗಳಲ್ಲಿ ಬೀಡಿ ತಯಾರಕರು ತಮ್ಮ ಬೀಡಿ ಕಾರ್ಮಿಕರಿಗೆ ಕಡಿಮೆ ವೇತನ ನೀಡಿ, ಬೀಡಿಯನ್ನು ತಯಾರು ಮಾಡುತಿರುತ್ತಾರೆ. ಈ ಕಾರಣದಿಂದಾಗಿ, ಕರ್ನಾಟಕ ಬೀಡಿ ಉದ್ದಿಮೆದಾರರು ಬೇರೆ ರಾಜ್ಯಗಳಲ್ಲಿ ಬೀಡಿ ಕಟ್ಟಿಸುವ ಕೆಲಸ ಮಾಡುತ್ತಿರುವುದು ನಿಜವಾಗಿರುತ್ತದೆ. ಇಲ್ಲಿನ ಬೀಡಿ ಉತ್ಪಾದನಾ ಖರ್ಚು ಜಾಸ್ತಿಯಿರುವುದು ನೆರೆಯ ರಾಜ್ಯಗಳಲ್ಲಿ ಬೀಡಿ ಕಟ್ಟಿಸುತ್ತಿರುವುದಕ್ಕೆ ಮತ್ತೊಂದು ಕಾರಣವಾಗಿದೆ.

ಕಾರ್ಮಿಕ ಅತಿ ಹೆಚ್ಚಿನ ಸಂಖ್ಯೆಯಲ್ಲಿ ನಿರುದ್ಯೋಗಿಗಳಾಗುವ ಸಂದರ್ಭದಲ್ಲಿ ರಾಜ್ಯ ಸರ್ಕಾರ ಕೂಡಲೇ ಪರ್ಯಾಯ ವ್ಯವಸ್ಥೆಯಾಗಿ ಉದ್ಯೋಗ ನೀಡಲು ಸಾಧ್ಯವಾಗೆದು. ಆದರೆ ಈ ಕಾರ್ಮಿಕರು ರಾಜ್ಯ ಮತ್ತು ಕೇಂದ್ರದ ಸ್ವಶಕ್ತಿ ಯೋಜನೆಗಳ ಸೌಲಭ್ಯಗಳನ್ನು ಪಡೆಯಬಹುದಾಗಿದೆ. ಕೊನೆಯದಾಗಿ ಈ ಉದ್ದಿಮೆಯ ಸಾದಕಬಾದಕಗಳು ಏನೇ ಇದ್ದರೂ ಕಾರ್ಮಿಕರ ಹಿತರಕ್ಷಣೆಯ

ಸಲುವಾಗಿ ಸರ್ಕಾರವು ವಿವಿಧ ಯೋಜನೆಗಳಡಿ ಅನುಷ್ಠಾನಗೊಳಿಸಿರುವ ವೇತನ ಸೌಲಭ್ಯ, ಆರೋಗ್ಯ, ವಸತಿ, ಸಾಮೂಹಿಕ ವಿಮೆ, ಮನರಂಜನೆ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿವಿಧ ಸವಲತ್ತುಗಳ ಕಾಯ್ದೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಲಾಗುವುದು.

12.40 ಪಿಎಂ

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರಲ್ಲಿ ಕ್ಲಾರಿಫಿಕೇಶನ್ ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಅಧ್ಯಕ್ಷರು: ಎರಡು ಕ್ಲಾರಿಫಿಕೇಶನ್ ತಾವು ಕೇಳಬಹುದು.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ಪ್ರಶ್ನೆ. ಮೊನ್ನೆ ಮಂಗಳೂರಿನಲ್ಲಿ ಸುಮಾರು 45 ಸಾವಿರ ಮಹಿಳೆಯರು ಬೀಡಿ ಕಾರ್ಮಿಕರ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಮಹಿಳೆಯರು ತಮ್ಮ ಕಷ್ಟವನ್ನು ಹೇಳಿಕೊಂಡಿದ್ದಾರೆ. ಬಹುಶ: ಅವುಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಸದನದಲ್ಲಿ ಒಂದು ದಿನವನ್ನೇ ಅವಕಾಶ ಮಾಡಿ ಕೊಡಬೇಕಾಗುತ್ತದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ಇವೊತ್ತಿನ ಪರಿಸ್ಥಿತಿಯಲ್ಲಿ ಸಾಮಾನ್ಯವಾಗಿ ನಮ್ಮ ಭಾಗದಲ್ಲಿ ಅದರಲ್ಲೂ ವಿಶೇಷವಾಗಿ ದಕ್ಷಿಣಕನ್ನಡ ಹಾಗೂ ಉಡುಪಿ ಭಾಗದಲ್ಲಿ ಹೆಚ್ಚಿನ ಮನೆಗಳಲ್ಲಿ ಮಹಿಳೆಯರೇ ಬೀಡಿ ಕಟ್ಟಿ ಕುಟುಂಬದ ಜೀವನ ನಿರ್ವಹಣೆ ಮಾಡುವಂಥ ಸಂಗತಿಯಾಗಿದೆ. ಏಕೆಂದರೆ ಅಲ್ಲಿರುವಂಥ ಮೀನುಗಾರರಿಗೆ ಆಗಿರುವಂಥ ತೊಂದರೆ ಆಗಿಬಹುದು, ಅಡಿಕೆ ಉತ್ಪನ್ನಗಳಿಗೆ ಆದಂಥ ತೊಂದರೆ ಇರಬಹುದು. ಈ ತೊಂದರೆಗಳಿಂದಾಗಿ ಬೀಡಿ ಕಟ್ಟಿಯೇ ಕೆಲಸ ಮಾಡಿ ಬದುಕುವಂಥವರು. ಕಾಗೋಡು ತಿಮ್ಮಪ್ಪನವರಿಗೆ ಚೆನ್ನಾಗಿ ಗೊತ್ತಿದೆ. ಸುಮಾರು ದಕ್ಷಿಣ ಕನ್ನಡ ಮತ್ತು ಉಡುಪಿ ಭಾಗದಲ್ಲಿ ಈ ರೀತಿ ಹೆಚ್ಚಿನ ಮಹಿಳೆಯರು ಇದ್ದಾರೆ. ಇವೊತ್ತು ಮಂತ್ರಿಗಳು ಅಂಕಿ ಅಂಶ ಕೊಟ್ಟಿರುವುದರಲ್ಲಿ ಇಡೀ ರಾಜ್ಯದಲ್ಲಿ 2 ಲಕ್ಷದ 79 ಸಾವಿರ ಎಂದು ಹೇಳಿದ್ದಾರೆ. ಮೊನ್ನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರ ಸಮಾವೇಶದಲ್ಲಿ ಅವರು ಅಂಕಿ ಕೊಟ್ಟಿದ್ದಾರೆ. ಸುಮಾರು ಮೂರೂವರೆ ಲಕ್ಷ ಜನರು ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯಲ್ಲಿ ಈ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ನಿಮಗೆ ಗೊತ್ತಿರಬಹುದು ಅಧ್ಯಕ್ಷರೆ. ಸುಮಾರು ಮೂರು ಕೋಟಿ ಜನರು ಇಡೀ ದೇಶದಲ್ಲಿಯೇ ಬೀಡಿ ಉದ್ಯಮದಲ್ಲಿ ಕೆಲಸಗಾರರಾಗಿ ತೊಡಗಿದ್ದಾರೆ. 800 ಕೋಟಿ ರೂಪಾಯಿ ವಿದೇಶಿ ವಿನಿಮಯ ಬರುತ್ತಿತ್ತು. ಬಹುಶ: ಇದನ್ನು ನೋಡಿದರೆ ಅಧ್ಯಕ್ಷರೆ, ಇದಕ್ಕೆ ಬಂಡವಾಳ ಹಾಕಬೇಕಾಗಿಲ್ಲ. ಕಡಿಮೆ ಬಂಡವಾಳ ಬೇಕಾಗುತ್ತದೆ. ಯಾವುದೇ ಯಂತ್ರವನ್ನು ಉಪಯೋಗ ಮಾಡಬೇಕಾಗಿಲ್ಲ, ಅಂದರೆ ಯಂತ್ರ ರಹಿತವಾದಂಥದ್ದು, ಕಾರ್ಮಿಕ ಅವಲಂಬಿತವಾದದ್ದು, ಕೇವಲ ಬೆರಳು ಮತ್ತು ಕತ್ತರಿಯನ್ನು ಉಪಯೋಗ ಮಾಡಬೇಕಾಗುತ್ತದೆ. ಇಷ್ಟೇ ಈ ಕೆಲಸಕ್ಕೆ ಸಾಕಾಗುತ್ತದೆ. ಬೆರಳು ಮತ್ತು ಕತ್ತರಿಯನ್ನೇ ಉಪಯೋಗ ಮಾಡಿಕೊಂಡು ಅವರು ಬದುಕುವಂಥವರಾದ್ದರೆ. ಈಗೇನಾಗಿದೆ ಎಂದರೆ ಹಿಂದೆ ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ದೊಡ್ಡ ದೊಡ್ಡ ಬೀಡಿ ಉದ್ದಿಮೆದಾರರು ಅವರ ಬೀಡಿ ಕಂಪನಿಗಳಲ್ಲಿಯೇ ಅದನ್ನು ತಯಾರಿಸಿ ಮಾಡುತ್ತಿದ್ದರು. ಆದರೆ 1948ನೇ ಇಸವಿ ನಂತರ ಇದೆಲ್ಲಾ ಗ್ರಾಮಾಂತರ ಪ್ರದೇಶಗಳಿಗೆ ಹೋಯಿತು. ಗ್ರಾಮಾಂತರ ಪ್ರದೇಶದಲ್ಲಿರುವ ಕೂಲಿ ಕಾರ್ಮಿಕರು ಅವರ ಮನೆಯಲ್ಲಿರುವ ಮಹಿಳೆಯರು ಆರ್ಥಿಕ ಸ್ವಾಲಂಬನೆ ಗೋಸ್ಕರ ಈ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು. ಮನೆಯಲ್ಲಿ ಯಜಮಾನ ದುಡಿಯುವನು ಇದ್ದರೂ ಕೂಡ ಆ